ಆ) ಈಗಿದ್ದ ಮಹಿವಾಟಾ ದಾರಿಯಲ್ಲಿ ರಸ್ತೆ ನಿರ್ಮಾಣವನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ ಕೈಗೊಳ್ಳಲು ಜಿಲ್ಲಾಧಿಕಾರಿಗಳು ತಮ್ಮ ತಪಾಸಣೆಯ ಅವಧಿಯಲ್ಲಿ ಸೂಚಿಸಿರುವರು. ಆಕ್ಕಪಕ್ಕದ ಜಮೀನಿನ ಮಾಲೀಕರ ತಕರಾರಿನಿಂದ ಈ ರಸ್ತೆ ನಿರ್ಮಾಣ ಕೆಲಸವನ್ನು ಕೈಗೊಳ್ಳಲಾಗಲಿಲ್ಲ. ಆದ್ದರಿಂದ ಅವರು ಭೂ ಸ್ವಾಧೀನ ಪಡೆದುಕೊಳ್ಳಲು ಸೂಚಿಸಿರುವರು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಗಳಂತಹ ಯೋಜನೆಗಳಲ್ಲಿ ಭೂಸ್ವಾಧೀನ ಪಡೆಯಲು ಅವಕಾಶ ಇಲ್ಲದೆ ಇದ್ದ ಕಾರಣ ಭೂ ಸ್ವಾಧೀನ ಪಡೆದುಕೊಳ್ಳುವ ಸೂಚನೆಗಳು ಪ್ರಗತಿ ಹೊಂದಲಿಲ್ಲ. ಹಾಗೂ ವಿಕ್ಯಕ್ತಿಗತ ಸ.ನಂ.ನ ಜಮೀನಿಗೆ ಕೂಡು ರಸ್ತೆ ನಿರ್ಮಾಣ ಕೆಲಸವು ಲೋಕೋಪಯೋಗಿ ಇಲಾಖೆಯ ಯಾವ ಯೋಜನೆಯಲ್ಲಿ ಸೇರ್ಪಡೆಯಾಗಿಲ್ಲ. ಕಾರಣ ಭೂ ಸ್ವಾಧೀನ ಪಡೆದುಕೊಳ್ಳುವ ಸೂಚನೆಗಳನ್ನು ಪರಿಗಣಿಸಲಿಲ್ಲ.

ಇ) ಈ ೧ ಕಿ.ಮಿ. ಉದ್ದದ ರಸ್ತೆ ನಿರ್ಮಾಣಕ್ಕೆ ಅವಶ್ಯವಿರುವ ರಸ್ತೆ ರಚನೆ, ಗರಸು ಹಾಕುವುದು, ಖಡಿ ಹಾಕುವುದು ಮಂತ್ರ ಭೂ ಸ್ವಾಧೀನ ಮಾಡಿಕೊಳ್ಳಲು ತಗಲುವ ವೆಚ್ಚ ಸೇರಿ ಒಟ್ಟು ಸುಮಾರು ೨.೦ ಲಕ್ಷ ರೂಪಾಯಿ ವೆಚ್ಚ ಬರುವುದು.

ಈ) ಹರಿಜನವಾಡಾ ಕೂಡು ರಸ್ತೆ ನಿರ್ಮಾಣ ಯೋಜನೆಯ ಆಡಿಯಲ್ಲಿ ಗ್ರಾಮದಿಂದ ಹರಿಜನರು ವಾಸಿಸುವ ಕೇರಿಗೆ ಕೂಡು ರಸ್ತೆ ನಿರ್ಮಾಣ ಮಾತ್ರ ಆಳವಡಿಸಿರುತ್ತದೆ. ಆದರೆ ತೇಲಸಂಗ ಗ್ರಾಮದ ಸ.ನಂ. ೮೫ಳಿರ ಸಾಗುವಳಿ ಜಮೀನಿಗೆ ಹೋಗುವ ರಸ್ತೆಯು ವಿಕ್ಯಕ್ತಿಗತ ಜಮೀನಿಗೆ ಹೋಗುವ ರಸ್ತೆಯಾಗಿರುವುದರಿಂದ ಹಾಗೂ ಇಲ್ಲಿ ಆ ಗ್ರಾಮದ ಪರಿಶಿಷ್ಟ ಜಾತಿ ಜನಾಂಗದವರು ವಾಸವಾಗದೆ ಇರುವುದರಿಂದ ಈ ರಸ್ತೆ ರಚನೆ ಕೆಲಸವು ಹರಿಜನವಾಡಾ ಕೂಡು ರಸ್ತೆ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲು ಬರುವುದಿಲ್ಲ.

## ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯದ ಸ್ಥಾಪನೆ

೪೫೦ ಶ್ರೀಮತಿ ಲೀಲಾದೇವಿ ಪ್ರಸಾದ್ (ಅಥಣಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪಿಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು

ಆ) ವಿಶ್ವವಿದ್ಯಾಲಯ ಎಂದಿನಿಂದ ಆರಂಭವಾಗುವುದು?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಸಲಹೆ ನೀಡಲು ಶ್ರೀ ಸದಾಶಿವಪಡೆಯರ್ ಇವರನ್ನು ವಿನಂತಿಸಲಾಗಿತ್ತು. ಅವರು ವಿಸ್ತಾರವಾದ ಕಾರ್ಯಕ್ರಮ ಪಟ್ಟಿಯನ್ನು ನೀಡಿದ್ದಾರೆ. ವರದಿ ಪರಿಶೀಲನೆಯಲ್ಲಿದೆ.

ಆ) ಈ ವಿಶ್ವವಿದ್ಯಾಲಯದ ಸ್ವರೂಪ, ಕಾರ್ಯವ್ಯಾಪ್ತಿ, ಅಗತ್ಯವಾದ ಹಣ ಇವುಗಳು ಇನ್ನೂ ನಿರ್ಧಾರವಾಗಿಲ್ಲವಾದ್ದರಿಂದ ಇದರ ಬಗ್ಗೆ ಸದ್ಯಕ್ಕೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ.

## ಹರಿಹರ ತಾಲ್ಲೂಕು ನಂದಿಗುಡಿ ಹತ್ತಿರ ಕಟ್ಟಿಸಬೇಕೆಂದಿರುವ ಸೇತುವೆ ಬಗ್ಗೆ

೪೭೩ ಶ್ರೀ ಬಿ. ಜಿ. ಕೊಟ್ರಪ್ಪ, (ಹರಿಹರ) ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಿಹರ ತಾಲ್ಲೂಕು ನಂದಿಗುಡಿ ಹತ್ತಿರ ಕಟ್ಟಬೇಕೆಂದಿರುವ ಸೇತುವೆಗೆ ೧೯೮೭ನೇ ಆಯ ವ್ಯಯದಲ್ಲಿ ಹೆಚ್ಚಿನ ಹಣ ನೀಡಿ ಶಂಕುಸ್ಥಾಪನೆ ಮಾಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ?